## ವಾಸ್ತುವಿಗೇಕೆ ಪ್ಲಾಸ್ಟಿಕ್ ವಸ್ತು

ವಾಸ್ತುದೋಷ ಪರಿಹಾರದ ಸೋಗಿನಲ್ಲಿ ಇಂದು ಅಮಾಯಕರನ್ನು ವಂಚಿಸಿ, ಸುಲಿಯುವ ಬಹುದೊಡ್ಡ ದಂಧೆಯೇ ನಮ್ಮ ನಡುವೆ ವಿಶಾಲವಾಗಿ ಬೇರು ಬಿಟ್ಟಿದೆ. ಆದರೂ ಅದು ಕೆಲವರ ಭಾವಕ್ಕೆ ತಕ್ಕಂತೆ ಚಲಾವಣೆಯಲ್ಲಿದೆ. ಪ್ಲಾಸ್ಟಿಕ್‌ನಿಂದ ತಯಾರಿಸಲಾದ ಹೂವು ಮತ್ತು ಹರಿವಾಣದಲ್ಲಿ ತುಸು ನೀರು ಹಾಕಿ ದೇವರ ಜಗುಲಿ ಮೇಲಿಟ್ಟರೆ ಕಷ್ಟಗಳು ಕರಗಿ ನೀರಾಗುತ್ತವೆಂಬ ನಂಬಿಕೆ (ಅ) ಜ್ಞಾನಿಗಳದ್ದು. ಪ್ಲಾಸ್ಟಿಕ್ ಬಳಕೆ ಪರಿಸರ ಹಾಗೂ ಆರೋಗ್ಯಕ್ಕೆ ಹಾನಿಕರವೆಂದು ಬಾಯಿ ಬಡಿದುಕೊಳ್ಳುವ ನಮ್ಮೂರಿನ ಹಿರಿಯ ಪರಿಸರವಾದಿ ಒಬ್ಬರ ಮನೆಯಲ್ಲಿ ಈ ಪ್ಲಾಸ್ಟಿಕ್ ಹೂವು ಹರಿವಾಣ ವಾಸ್ತುವಿನ ಹೆಸರಿನಲ್ಲಿ ಬಳಕೆಯಾಗುತ್ತಿದೆ. ಇದನ್ನು ನೋಡಿ ಅವರ ಪರಿಸರವಾದಕ್ಕೆ ಏನು ಹೇಳಬೇಕು ಎಂದು ತೋಚುತ್ತಿಲ್ಲ..!

■ **ಸುನೀಲಕುಮಾರ ಸುಧಾಕರ, ವಿಜಯಪುರ**





## ಚೆಲುವಾಂತ ವರದರಾಜ

ಹಾಸನದಿಂದ ಹದಿನೈದು ಕಿಲೋಮೀಟರ್ ದೂರದಲ್ಲಿ ಕೊಂಡಜ್ಜಿ ಎಂಬ ಪುಟ್ಟ ಹಳ್ಳಿಯೊಂದಿದೆ. ಅಲ್ಲಿನ ದೇಗುಲದಲ್ಲಿ ವರದರಾಜಸ್ವಾಮಿಯ ವಿಗ್ರಹ ನೋಡಲು ಬಲು ಆಕರ್ಷಕ. ದೇವಾಲಯದ ಕಟ್ಟಡದಲ್ಲಿ ವಿಶೇಷತೆ ಏನೂ ಇಲ್ಲ. ಹಿಂದೆ ಇದ್ದ ಕಟ್ಟಡವನ್ನು ಬೀಳಿಸಿ ಈಗ ಕಾಂಕ್ರೀಟ್ ಕಟ್ಟಡ ಕಟ್ಟಲಾಗುತ್ತಿದೆ. ಆದರೆ, ಗರ್ಭಗುಡಿಯ ಮೂರ್ತಿ ಹದಿನಾಲ್ಕು ಅಡಿ ಎತ್ತರವಿದ್ದು ನೋಡಲು ಬಹಳ ಸುಂದರವಾಗಿದೆ. ಶಂಖ ಚಕ್ರ ಗದಾ ಪದ್ಮಧಾರಿ ರೂಪದ ಈ ವಿಗ್ರಹವನ್ನು ಬೇಲೂರಿನ ದೇವಾಲಯದಲ್ಲಿ ಪ್ರತಿಷ್ಠಾಪಿಸಲು ಕೊಂಡೊಯ್ಯಬೇಕಾಗಿತ್ತು. ಆದರೆ, ಸಕಾಲಕ್ಕೆ ಈ ವಿಗ್ರಹವನ್ನು ಅಲ್ಲಿಗೆ ತಲುಪಿಸಲು ಸಾಧ್ಯವಾಗದಕ್ಕೆ ಇಲ್ಲಿಯೇ ಪ್ರತಿಷ್ಠಾಪಿಸಲಾಯಿತು ಎಂಬ ಪ್ರತೀತಿ ಇದೆ. ಕಪ್ಪು ಕಲ್ಲಿನ ವರದರಾಜಸ್ವಾಮಿಯ ವಿಗ್ರಹ ಇದಾಗಿದ್ದು, ವಿಗ್ರಹದ ಎದೆಯ ಮೇಲೆ ಪುಟ್ಟ ಲಕ್ಷ್ಮಿಯ ಕೆತ್ತನೆಯಿದೆ. ಹಾಸನದಿಂದ ಹಳೇಬೀಡಿಗೆ ಹೋಗುವ ರಸ್ತೆಯಲ್ಲಿ ಸಾಲಗಾಮೆಯ ನಂತರ ಸ್ವಲ್ಪ ಮುಂದೆ ಹೋಗಿ, ಎಡಕ್ಕೆ ತಿರುಗಿ ಮೂರು ಕಿಲೋಮೀಟರ್ ಹೋದರೆ ಕೊಂಡಜ್ಜಿ ಗ್ರಾಮ ಸಿಗುತ್ತದೆ.

■ **ಕೆ.ಎಸ್. ನೀತಾ, ಹಾಸನ**

## ವ್ಯಾನಿಟಿ ಬ್ಯಾಗ್

ನಾಗರಬಾವಿ ನಿವಾಸಿ ಕರಕುಶಲ ನಂದೀತಳೆ ಕಸ್ತೂರಿ ಶಂಕರ್ ಅವರಿಗೆ ಪರಿಸರ ನೈರ್ಮಲ್ಯದ ಬಗ್ಗೆ ಬಹಳ ಕಾಳಜಿ. ಮನೆಗೆ ಸಾಮಗ್ರಿಗಳನ್ನು ತರುವಾಗ ಅವುಗಳ ಜೊತೆಗೇ ಬರುವ ಪ್ಲಾಸ್ಟಿಕ್ ಕವರ್‌ಗಳನ್ನು ಎಲ್ಲೆಂದರಲ್ಲಿ ಬಿಸಾಡದೆ ಸಂಗ್ರಹಿಸಿಟ್ಟು ಕ್ರೋಶಾ ಕಡ್ಡಿಯನ್ನು ಉಪಯೋಗಿಸಿ ಮಹಿಳೆಯರು ಬಳಸುವ ವ್ಯಾನಿಟಿ ಬ್ಯಾಗನ್ನು ತಯಾರಿಸಿದ್ದಾರೆ. ಇದು ನೋಡಲು ವಿಭಿನ್ನವಾಗಿ ಹಾಗೂ ಆಕರ್ಷಕವಾಗಿದೆ. ಈ ಬ್ಯಾಗ್ ತಯಾರಿಕೆಯ ಹಿಂದೆ ಪರಿಸರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕಾಳಜಿ ಅವರಲ್ಲಿದೆ. ಕಸ್ತೂರಿ ಅವರು ಇದರಿಂದ ಜನರ ಮೆಚ್ಚುಗೆಯನ್ನೂ ಗಳಿಸಿದ್ದಾರೆ.

■ **ಸುಭದ್ರಾ, ತಡಗಳತಿ**

